**ದಿಃ 12.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ ಆರ್ ಬಿ ವಕೀಲರಿಂದಃ

ನಿಡಿ-1 ರಿಂದ 7ರಲ್ಲಿರುವ ಮಂಜುನಾಥ ಯಾರು ಎಂದರೆ ನನಗೆ ಗೊತ್ತಿಲ್ಲ. ನಿಡಿ-6ರಲ್ಲಿ ಕಲಂ ನಂ.9ರಲ್ಲಿ ವಿಲಿಯಂ ಡಿ ಸಿಲ್ವಾ ಇವರ ಹೆಸರು ಇದ್ದು ಯಾವ ಆಧಾರದಲ್ಲಿ ದಾಖಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾಖಲೆಯನ್ನು ಹಾಜರುಮಾಡುವಾ ನೋಡಿದ್ದೇನಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಡಿ-1ರಲ್ಲಿ ಕಾಮಿಲಿ ಡಿಸಿಲ್ವಾ ರವರ ಹೆಸರು ದಾವೆ ಹಾಕಿದ ನಂತರ ತಿದ್ದುಪಡಿಯಾಗಿದೆ ಎಂದರೆ ಸುಳ್ಳು. ಅದಕ್ಕೂ ಮೊದಲು ಸದರಿ ದಾಖಲೆ ಕಮಲಾ ಬಾಯಿ ಇವರ ಹೆಸರಿನಲ್ಲಿ ಇತ್ತು ಎಂದರೆ ಸುಳ್ಳು.

ನಿಡಿ-11ನ್ನು ಯಾರು ಬರೆದುಕೊಟ್ಟಿರುವುದು ಎಂದರೆ 6ನೇ ಪ್ರತಿವಾದಿ ವಿಲಿಯಂ ಥಾಮಸ್ ಡಿಸಿಲ್ವಾ ಎಂದು ನುಡಿಯುತ್ತಾರೆ. ಯಾವಾಗ ಬಂದಿರುವುದು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನಿಡಿ-13 ದಾಖಲೆ ಪಡೆದುಕೊಳ್ಳಲು ಯಾರು ಹೋದದ್ದು ಎಂದರೆ ನನಗೆ ಗೊತ್ತಿಲ್ಲ. ನಿಡಿ-11 ಮತ್ತು 13 ದಾಖಲೆಗಳನ್ನು ನಾನು ಹಾಗೂ 6ನೇ ಪ್ರತಿವಾದಿ ಸೇರಿ ಸೃಷ್ಟಿ ಮಾಡಿರುವುದು ಎಂದರೆ ಸುಳ್ಳು. ನಿಡಿ-1ರಲ್ಲಿ ಕಮಲಾಬಾಯಿ ಹೆಸರು ತೆಗೆದುಹಾಕಲು ನಿಪಿ-25 ರಂತೆ ನಡಾವಳಿ ಆಗಿದೆ ಎಂದರೆ ನಿಜ. ಐಟಂ ನಂ.3 ರಿಂದ 6ರ ಖಾತೆ ಬದಲಾವಣೆಗೆ 6ನೇ ಪ್ರತಿವಾದಿ ಪ್ರಯತ್ನ ಮಾಡಿದ್ದಾರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.3 ರಿಂದ 6ರ ಖಾತೆ ಬದಲಾವಣೆ ಆಗಿರುವುದು ಯಾವಾಗ ಎಂದರೆ ಸಾಕ್ಷಿ 1978 ಎಂದು ನುಡಿಯುತ್ತಾರೆ. ಖಾತೆ ಬದಲಾವಣೆಗೆ 6ನೇ ಪ್ರತಿವಾದಿ ಅರ್ಜಿ ನೀಡಿ ಪ್ರಕರಣ ಆದ ಬಗ್ಗೆ ಗೊತ್ತಿದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಪ್ರಕರಣ ನಿಪಿ-26ರಂತೆ ವಜಾ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-27ರಂತೆ ಸದರಿ ಪ್ರಕರಣವನ್ನು ಮೇಲ್ಮನವಿ ಮುಖಾಂತರ ಪ್ರಶ್ನಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣ ಬಾಕಿ ಇರುವಾಗಲೇ ಐಟಂ 3 ರಿಂದ 6ನ್ನು 6ನೇ ಪ್ರತಿವಾದಿ ಹೆಸರಿಗೆ ಬದಲಾವಣೆ ಮಾಡಿಕೊಂಡಿದ್ದೇವೆ ಎಂದರೆ ಸುಳ್ಳು.

ನಿಡಿ-13ರ ಸತ್ಯಾಸತ್ಯತೆ ಬಗ್ಗೆ ಗ್ರಾಮ ಲೆಕ್ಕಿಗರಲ್ಲಿ ವಿಚಾರ ಮಾಡಿದ್ದೇನಾ ಎಂದರೆ ಸಾಕ್ಷಿ ತಾನು ಸದರಿ ಪ್ರಕರಣದಲ್ಲಿ ಪಕ್ಷಗಾರನಲ್ಲದ ಕಾರಣ ಗೊತ್ತಿಲ್ಲ ಎಂದದು ನುಡಿಯುತ್ತಾರೆ. ಸದರಿ ದಾಖಲೆ ನ್ಯಾಯಾಲಯಕ್ಕೆ ನಾನೇ ಹಾಜರುಮಾಡಿದ್ದು ಎಂದರೆ ನಿಜ. ಸದರಿ ದಾಖಲೆಯನ್ನು ವಿಮರ್ಶೆ ಮಾಡಿದ್ದೇನಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಡಿ-13

ಯಾವ ದಾಖಲೆ ಎಂದರೆ ಸಾಕ್ಷಿ 6ನೇ ಪ್ರತಿವಾದಿಯ ಆಸ್ತಿಗೆ ಸಂಬಂಧಪಟ್ಟ ದಾಖಲೆ ಎಂದು ನುಡಿಯುತ್ತಾರೆ. ಅದರಲ್ಲಿ ಏನು ಬರೆದಿದೆ ಎಂದರೆ ಸಾಕ್ಷಿ ಓದಿರುವುದಾಗಿ ನುಡಿಯುತ್ತಾರೆ.

6ನೇ ಪ್ರತಿವಾದಿಯ ಹೆಸರಿನಲ್ಲಿರುವ ಆಸ್ತಿಗಳ ಖಾತಾ ಸಂಖ್ಯೆ ಕೇಳಲಾಗಿ ಸಾಕ್ಷಿ ನೆನಪಿಲ್ಲ ಎಂದು ನುಡಿಯುತ್ತಾರೆ. ನಾನು ಸದರಿ ಖಾತೆ ಬಗ್ಗೆ ಮುಖ್ಯ ವಿಚಾರಣೆಯಲ್ಲಿ ತಿಳಿಸಿದ್ದೇನಾ ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿಗೆ ಒಂದು ಪಹಣಿ ಪತ್ರಿಕೆ ತೋರಿಸಿ ಸದರಿ ದಾಖಲೆ ಐಟಂ ನಂ.3ರ ಪಹಣಿ ಪತ್ರಿಕೆ ಎಂದು ಕೇಳಲಾಗಿ ಸಾಕ್ಷಿ ಅದನ್ನು ಹೌದು ಎಂದು ಒಪ್ಪಿಕೊಂಡ ಕಾರಣ ಅದನ್ನು ನಿಪಿ-33 ಎಂದು ಗುರುತಿಸಲಾಯಿತು.

ಕ್ಯಾಮಿಲ್ ಡಿಸಿಲ್ವಾ ರವರು ಗಣಿಗಾರಿಕೆ ಯಾವ ಅವಧಿಯಲ್ಲಿ ಮಾಡಿದ್ದಾರೆ ಎಂದರೆ ಸಾಕ್ಷಿ 1954 ರಿಂದ ಡಿಸೆಂಬರ್ 1976 ರವರೆಗೆ ಎಂದು ನುಡಿಯುತ್ತಾರೆ. 6, 12, 13ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ. 10, 15 ಮತ್ತು 16 ಪರ ಪ್ರತಿವಾದಿಯರನ್ನು ಕೂಗಿ ಕರೆಯಲಾಗಿ ಯಾರೂ ಹಾಜರಿಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು. ಅದರ ಬಗ್ಗೆ ನನ್ನ ಬಳಿ ದಾಖಲೆ ಇದೆಯಾ ಎಂದರೆ ಸಾಕ್ಷಿ ನೀಡಿರುವುದಾಗಿ ನುಡಿಯುತ್ತಾರೆ. ನಾನು ಹೇಳಿದಂತೆ 1976ರವರೆಗೂ ಸದರಿಯವರು ಗಣಿಗಾರಿಕೆ ಮಾಡಿಲ್ಲ ಎಂದರೆ ಸುಳ್ಳು. ಅವರು ಸಾಯುವ 2 ವರ್ಷಕ್ಕೂ ಮೊದಲು ಹಾಸಿಗೆ ಹಿಡಿದಿದ್ದರು ಎಂದರೆ ಸುಳ್ಳು.

ಕ್ಯಾಮಿಲ್ ಡಿಸಿಲ್ವಾ ರವರು ಜೀವಿತಾವಧಿಯಲ್ಲಿ ಎಲ್ಲಿ ವಾಸ ಇದ್ದರು ಎಂದರೆ ಪಣ್ಣಂಗಿಲ ದಲ್ಲಿ ಎಂದು ನುಡಿಯುತ್ತಾರೆ. ನನ್ನ ತಂದೆ ಸಹಾ ಸದರಿ ಮನೆಯಲ್ಲಿ ಸಾಯುವವರೆಗೂ ವಾಸವಿದ್ದರು ಎಂದರೆ ಸಾಕ್ಷಿ ಸಾಯುವ 15 ವರ್ಷಕ್ಕೂ ಮೊದಲು ಇದ್ದರು ಎಂದು ನುಡಿಯುತ್ತಾರೆ. ನನ್ನ ತಂದೆ ಯಾವ ವರ್ಷದಲ್ಲಿ ಮೃತಪಟ್ಟರು ಎಂದರೆ ಸಾಕ್ಷಿ 2009ರಲ್ಲಿ ಎಂದು ನುಡಿಯುತ್ತಾರೆ. ಕ್ಯಾಮಿಲ್ ಡಿಸಿಲ್ವಾ ರವರ ಪತ್ನಿ ಯಾವಾಗ ಮೃತಪಟ್ಟರು ಎಂದರೆ ಸಾಕ್ಷಿ 1970ರಲ್ಲಿ ಎಂದು ನುಡಿಯುತ್ತಾರೆ. ನನ್ನ ತಂದೆ ಕ್ಯಾಮಿಲ್ ಡಿಸಿಲ್ವಾ ರವರ ಹಿರಿಯ ಮಗ ಎಂದರೆ ನಿಜ. ನನ್ನ ತಂದೆ ಮಾತ್ರ ಕ್ಯಾಮಿಲ್ ಡಿಸಿಲ್ವಾ ರವರ ಜೊತೆ ವಾಸವಿದ್ದರು ಎಂದರೆ ನಿಜ.

6ನೇ ಪ್ರತಿವಾದಿ ಖಾಯಂ ವಾಸ್ತವ್ಯ ಬಾಂಬೆಯಲ್ಲಿ ಎಂದರೆ ನಿಜ. ಸದರಿಯವರು ಬಾಂಬೆಗೆ ಯಾವ ವರ್ಷದಲ್ಲಿ ಹೋದರು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅವರು ವಿದೇಶದಲ್ಲಿ ಇದ್ದರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಈಗ ಉದ್ಯೋಗದಲ್ಲಿ ಇದ್ದಾರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿಯವರು ವಿದೇಶದಲ್ಲಿ ಯಾವ ಅವಧಿಯಲ್ಲಿ ಉದ್ಯೋಗ ಮಾಡಿರುವುದು ಎಂದರೆ ನನಗೆ ಗೊತ್ತಿಲ್ಲ.

ಸದರಿಯವರು ಮುಂಬಯಿಯಿಂದ ಬಂದರೆ ನನ್ನ ಮನೆಯಲ್ಲಿ ಉಳಿದುಕೊಳ್ಳುವುದು ಎಂದರೆ ಸುಳ್ಳು. ಬಂಟ್ವಾಳದಲ್ಲಿ ಅವರಿಗೆ ಪರಿಚಯಸ್ಥರ ಮನೆ ಇದೆಯಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ನಿಡಿ-75ರ ಷರಾ ಯಾರು ಬರೆದಿರುವುದು ಎಂದರೆ ನನಗೆ ಗೊತ್ತಿಲ್ಲ. ಅದರ ಬಗ್ಗೆ ಯಾರು ಮಾಹಿತಿ ನೀಡಿರುವುದು ಎಂದರೆ ನನಗೆ ಗೊತ್ತಿಲ್ಲ. ನಿಡಿ-75ನ್ನು ನಾನು ಹಾಜರುಮಾಡಿದ್ದೇನೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಹಾಜರುಮಾಡಿರುವ ಎಷ್ಟು ದಿನಗಳ ಮೊದಲು ದಾಖಲೆ ಬಗ್ಗೆ ಮಾಹಿತಿ ಬಂತು ಎಂದರೆ ಸಾಕ್ಷಿ ಮೂರು ತಿಂಗಳು ಹಾಗೂ ಅದಕ್ಕೂ ಮೊದಲು ನನಗೆ ದಾಖಲೆ ಬಗ್ಗೆ ಮಾಹಿತಿ ಇತ್ತು ಎಂದು ನುಡಿಯುತ್ತಾರೆ. ಅದನ್ನು ನನಗೆ ಯಾರು ನೀಡಿದ್ದಾರೆ ಎಂದರೆ ಸಾಕ್ಷಿ 6ನೇ ಪ್ರತಿವಾದಿ ಎಂದು ನುಡಿಯುತ್ತಾರೆ. ನಾನು ಅವರ ಬಳಿ ಇಷ್ಟು ಸಮಯ ದಾಖಲೆ ಎಲ್ಲಿ ಇತ್ತು ಎಂದು ಕೇಳಿದ್ದೇನಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನನಗೆ ಪ್ರಥಮವಾಗಿ ದಾಖಲೆ ಬಗ್ಗೆ ಯಾವಾಗ ಮಾಹಿತಿ ಬಂತು ಎಂದರೆ ಸಾಕ್ಷಿ ಮಾಡುವಾಗಲೇ ಎಂದು ನುಡಿಯುತ್ತಾರೆ. ನನಗೆ ಯಾರು ಹೇಳಿದರು ಎಂದರೆ ಸಾಕ್ಷಿ ತಾನು ದಾಖಲೆ ಆದಾಗ ಇದ್ದೆ ಎಂದು ನುಡಿಯುತ್ತಾರೆ. ಆ ಸಮಯಕ್ಕೆ ನನಗೆ ಎಷ್ಟು ವಯಸ್ಸು ಎಂದರೆ ಸಾಕ್ಷಿ 14 ವರ್ಷ ಎಂದು ನುಡಿಯುತ್ತಾರೆ. ನನಗೆ ದಾಖಲೆ ಆಗುತ್ತದ ೆಎಂದು ಯಾರು ಹೇಳಿದರು ಎಂದರೆ ಸಾಕ್ಷಿ ಅಜ್ಜ ಎಂದು ನುಡಿಯುತ್ತಾರೆ. ಸದರಿಯವರು ಏನು ಹೇಳಿದರು ಎಂದರೆ ಸಾಕ್ಷಿ ಮರಣ ಶಾಸನ ಮಾಡುವುದಾಗಿ ಹೇಳಿದ್ದರು ಎಂದು ನುಡಿಯುತ್ತಾರೆ.

ಮರಣ ಶಾಸನ ಎಲ್ಲಿ ಮಾಡಿರುವುದು ಎಂದರೆ ಸಾಕ್ಷಿ ಪತ್ರ ಬರಹಗಾರ ನಾರಾಯಣ ರಾವ್ ರವರ ಮನೆಯಲ್ಲಿ ಎಂದು ನುಡಿಯುತ್ತಾರೆ. ಆ ಸಮಯಕ್ಕೆ ಯಾರು ಯಾರು ಇದ್ದರು ಎಂದರೆ ಸಾಕ್ಷಿ ಅಜ್ಜ,ಸಾಕ್ಷಿದಾರರು, ಹಾಗೂ ಪತ್ರ ಬರಹಗಾರರ ಮಕ್ಕಳು ಎಂದು ನುಡಿಯುತ್ತಾರೆ.

ವಕೀಲರ ಕೋರಿಕೆಯ ಮೇರೆಗೆ ಮುಂದುವರಿದ ಪಾಟೀ ಸವಾಲಿಗೆ ಮುಂದೂಡಲಾಗಿರುತ್ತದೆ.

**ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೇ ಕೇ ಸ ಇದೆ.**

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**
**ಬಂಟ್ವಾಳ.**